ವಿಮರ್ಶೆಗಳನ್ನು ಓದಿದಾಗ ನಾಲ್ಕು ಪುಟಗಳಲ್ಲಿ ಹೇಳಬಹುದಾದ್ದನ್ನು ನಲವತ್ತು ಪುಟ ಸುಮ್ಮನೇ ತುಂಬಿಸಿದ್ದಾರಲ್ಲ ಎಂದು ವ್ಯಥೆಯಾಗುತ್ತದೆ. ಕಿ.ರಂ ಒಮ್ಮೆ ನನ್ನ ಭಾಷಣ ಕೇಳಿದ ನಂತರ ಹೇಳಿದ್ದರು. 'ನೀನು ನಿನ್ನ ಎದುರಿರುವವರು ಎಲ್ಲವನ್ನೂ ಓದಿಕೊಂಡಿದ್ದಾರೆ ಎನ್ನುವ ನೆಲೆಯಲ್ಲಿ ಮಾತಾಡ್ತೀಯ. ಆದರೆ ಹಾಗಿರಲ್ಲ. ಯಾವುದು ನಿನಗೆ ಪ್ರಾಥಮಿಕ ಅನಿಸಿ ಹೇಳೋದು ಬೇಡ ಅಂದುಕೊಳ್ತೀಯೋ ಅವರಿಗೆ ಅದರ ಅಗತ್ಯವೂ ಇರುತ್ತೆ.' ನನಗೆ ಈಗ ನನ್ನ ಕೆಲವು ಬರಹಗಳನ್ನು ಓದಿದಾಗ ಅವುಗಳನ್ನು ವಿಸ್ತರಿಸಬೇಕು ಅನಿಸತ್ತೆ. ಇನ್ನು ಕೆಲವು ಬರಹಗಳ ಬಗ್ಗೆ ಬರೆದಿದ್ದು ಜಾಸ್ತಿಯಾಯಿತು ಎನಿಸುವುದೂ ಇದೆ.

ವಿಮರ್ಶೆಗೆ ಒಂದು ವಿಶಿಷ್ಟವಾದ ಶೈಲಿ ಇದೆ, ಒಂದು ಕ್ರಮ ಇದೆ. ಆದ್ದರಿಂದಲೇ ಹತ್ತಾರು ಕವಿಗಳ, ಲೇಖಕರ ಆಲೋಚನೆಗಳನ್ನು ಒಂದು ಪರಿಕಲ್ಪನೆಯ ಮೂಲಕ ಹೇಳಲಿಕ್ಕೆ ವಿಮರ್ಶೆಯಲ್ಲಿ ಸಾಧ್ಯವಾಗುತ್ತೆ. ಅಂಥದೊಂದು ಪರಿಭಾಷೆಯನ್ನು ಕಟ್ಟುವುದಿದೆಯಲ್ಲ ಅದು ಸೃಜನಶೀಲತೆಯ ಸಂಕೇತವೂ ಹೌದಲ್ಲವಾ? ವಿಮರ್ಶೆ ಅನ್ನೋದೆ ನನಗೆ ಪರಿಭಾಷೆಗಳ ಜೊತೆ ಕಟ್ಟಿಕೊಂಡಿರುವ ಆತ್ಮಸಖ್ಯ. ಅದಕ್ಕೇ 'ಪರಿಭಾಷಾದೇವಿ' ಎಂಬ ಖ್ಯಾತಿಯೋ ಅಪಖ್ಯಾತಿಯೋ ನನಗೆ ಪ್ರಾಪ್ತವಾಗಿದೆ. ನನಗೂ ಕೂಡ ವಿಮರ್ಶೆಯನ್ನು ತೇಜಸ್ವಿಯವರ ಕೃತಿಗಳ ತರ ಬರೆಯಬೇಕು ಎಂಬ ಆಸೆ ಇದೆ. ನನ್ನ ಬರವಣಿಗೆಯನ್ನು ಸರಳಗೊಳಿಸುವ ಪ್ರಯತ್ನಗಳು 'ನಾರಿಕೇಳಾ'ದಲ್ಲಿ ನಡೆಸಿದ್ದೇನೆ. ಇದಕ್ಕೆ ಬಂದ ಪ್ರತಿಕ್ರಿಯೆಗಳು ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸಿವೆ. ಅಮರೇಶ ನುಗಡೋಣಿ ಅವರು ನಾರಿಕೇಳಾ ಮತ್ತು ಬೆಳಕಿಗಿಂತ ಬೆಳ್ಳಗೆ ಪುಸ್ತಕಗಳು ಪ್ರಕಟವಾದಾಗ ಒಂದು ಕಾಮೆಂಟ್ ಮಾಡಿದ್ದರು– 'ಈ ಕೃತಿಗಳನ್ನು ಒಬ್ಬರೇ ಲೇಖಕರು ಬರೆದಿದ್ದಾರೆ ಎಂಬುದನ್ನು ನಂಬುವುದು ಕಷ್ಟ. 'ಬೆಳಕಿಗಿಂತ ಬೆಳ್ಳಗೆ' ತಾತ್ವಿಕವಾಗಿ ಸಂಕೀರ್ಣವಾಗಿದ್ದರೆ; 'ನಾರಿಕೇಳಾ' ಬಹಳ ಸುಲಲಿತವಾಗಿದೆ'. ಅದು ವಿಮರ್ಶೆಯ ಎರಡು ಮಾದರಿಗಳು ಅಂತಾದರೆ ಆ ಎರಡರ ಬಗೆಗೂ ನನಗೆ ಪ್ರೀತಿಯೂ ಇದೆ, ಗೌರವವೂ ಇದೆ.

ಇದನ್ನು ಇನ್ನೊಂದು ನೆಲೆಯಲ್ಲಿ ಹೇಳುವುದಾದರೆ ಯಾವಾಗಲೂ ಮಹಿಳೆಯರ ಬರಹದ ಕುರಿತು ಇರುವ ದೊಡ್ಡ ಆರೋಪ ಏನೆಂದರೆ ಹೆಣ್ಣುಮಕ್ಕಳಿಗೆ ಬಹಳ ಫಿಲಾಸಫಿಕಲ್ ಆಗಿ ಅಕಡೆಮಿಕ್ ಆಗಿ ಮಾತಾಡಕ್ಕೆ, ಬರೆಯಕ್ಕೆ ಬರಲ್ಲ, ಆ ಶಕ್ತಿ ಇರಲ್ಲ ಅವರಿಗೆ ಅಂತ. ಅಡುಗೆಮನೆ ಸಾಹಿತ್ಯವನ್ನು ಹೆಣ್ಣುಮಕ್ಕಳು ಬರೆದಿರುವುದನ್ನು ಕೆಟ್ಟದಾಗಿ ವ್ಯಾಖ್ಯಾನಿಸುವುದರಲ್ಲಿ ಅವರಿಗೆ ಅಕಡೆಮಿಕ್ ಶಕ್ತಿ ಇಲ್ಲ ಎಂಬುದು ಕೂಡಾ ಇರ್ತಾ ಇತ್ತು. ಅವರ ಆರೋಪಕ್ಕೆ ಪ್ರತಿಯಾಗಿ ನಾನು ಹೀಗೆ ಪ್ರಜ್ಞಾಪೂರ್ವಕವಾಗಿ ಬರೆದೆ ಎಂದು ಹೇಳ್ತಾ ಇಲ್ಲ. ಅದೆಲ್ಲ ನನ್ನ ತಲೆಯಲ್ಲಿ ಆಗಲೂ ಇಲ್ಲ, ಈಗಲೂ ಇಲ್ಲ. ಇಂಥ ಪ್ರಶ್ನೆ ಎದುರಾದಾಗ ನನಗೆ ಅನಿಸತ್ತೆ– ಅರೆ ಇಷ್ಟು ಗಂಭೀರವಾಗಿ ನಾವು ಬರೆದಾಗಲೂ ಸುಮಿತ್ರಾಬಾಯಿ, ವಿಜಯಾ ದಬ್ಬೆ, ಎಚ್.ಎಸ್. ಶ್ರೀಮತಿ, ನಾನು, ಸಬಿತಾ, ವಿನಯಾ ಯಾರೇ ಆಗಿರಬಹುದು, ನಾವೆಲ್ಲ ಹೀಗೆ ಪ್ರಯತ್ನ ಪಡುತ್ತಿರುವಾಗಲೂ ನಿಮಗೆ ಕಿಂಚಿದೂನ ಅಂತಲೇ ಅನಿಸುತ್ತಲ್ಲ. ಅದು ಯಾಕೆ? ಎಲ್ಲ ಶೈಕ್ಷಣಿಕ, ಕಲಾ ಕ್ಷೇತ್ರಗಳನ್ನು ಹೀಗೆ ಸ್ತ್ರೀವಾದಿ ದೃಷ್ಟಿಕೋನದಿಂದ ಪುಷ್ಟಗೊಳಿಸುವ ಒಂದು ಪ್ರಯತ್ನದಲ್ಲಿ ನಾವೆಲ್ಲ ತೊಡಗಿಕೊಂಡಿರಬೇಕಾದರೆ ಅದಕ್ಕೆ ತಾತ್ವಿಕತೆಯ ಅಗತ್ಯವೂ ಇದೆಯಲ್ವ? 'ಕುವೆಂಪು ಅವರ ಸಾಹಿತ್ಯದಲ್ಲಿ ದಲಿತರ ಪ್ರಶ್ನೆಗಳು' ಅಂತ ಅಂದಾಗ ಆ ತಾತ್ವಿಕತೆಯ ಭಾಷೆ ಯಾರಿಗೂ ಭಾರ ಅನಿಸಲ್ಲ. ಹೆಣ್ಣುಮಕ್ಕಳು ಬರೆದ ಕೂಡಲೇ ಯಾಕೆ ಹೀಗನಿಸುತ್ತೆ? ನನಗೂ ಎಲ್ಲ ಜನರಿಗೂ ವಿಮರ್ಶೆ ತಲುಪಿಸಬೇಕು ಅನ್ನೋ ಆಸೆ ಇದೆ. ಆದರೆ ಎಲ್ಲೋ ಒಂದು ಕಡೆ ಸ್ತ್ರೀವಾದಿ ವಿಮರ್ಶೆಗೆ ಬೇಕಾಗುವ ತಾತ್ವಿಕ ತಳಹದಿಯನ್ನು ನಾವು ಕಟ್ಟಲೇಬೇಕಲ್ಲ. ಹಾಗೆ ಕಟ್ಟಿದ ನಂತರ ನಾವು ಬೇಕಾದರೆ ಅದನ್ನು ಸರಳಗೊಳಿಸಬಹುದು. ಜೊತೆಗೆ ಹೇಗೆ ಕಾವ್ಯವನ್ನು ಓದಲು ಒಂದು ತಯಾರಿ ಬೇಕೋ ವಿಮರ್ಶೆಯ ಓದಿಗೂ ಹಾಗೊಂದು ತಯಾರಿ ಬೇಕು. ಇದು ನನಗಿರುವ ನಂಬಿಕೆ.